# ಸ್ಯಾಂಡಲ್‌ವುಡ್ ಸವ್ಯಸಾಚಿ



'ಮಧುರಾ ಪಿಸುಮಾತಿಗೆ' ಎನ್ನುವುದು 'ಬಿರುಗಾಳಿ' ಚಿತ್ರದ ಜನಪ್ರಿಯ ಗೀತೆ. ಈ ಗೀತೆಯ ರಾಗ ಸಂಯೋಜಕ ಅರ್ಜುನ್ ಕೂಡ ಪಿಸುಮಾತಿನ ತರುಣ. ಈ ಪಿಸುಮಾತಿನ ಮಾಧುರ್ಯಕ್ಕೆ ಈಚೆಗೆ 'ಸೌತ್‌ಸ್ಕೋಪ್ ಸಿನಿಮಾ ಪ್ರಶಸ್ತಿ' ದೊರೆತಿದೆ. ಅರ್ಜುನ್ ಅವರಿಗಿದು ಚೊಚ್ಚಲ ಪ್ರಶಸ್ತಿ. ಈ ಮೊದಲ ಪುಳಕದಲ್ಲಿ ಮುಳುಗಿರುವ ಅವರನ್ನು 'ಚಿತ್ರ ಸುಧಾ' ಮಾತಿಗೆಳೆಯಿತು. ಅರ್ಜುನ್ ನಿಧಾನಕ್ಕೆ ತಮ್ಮನ್ನು ತೆರೆದುಕೊಳ್ಳುತ್ತಾ ಹೋದರು.

ಅರ್ಜುನ್ ಬೆಂಗಳೂರಿನ ಹುಡುಗ. ಬಾಲ್ಯದಿಂದಲೂ ಸಿನಿಮಾದ ಧ್ಯಾನ, ಸಂಗೀತದ ಗುಂಗು. ಅಪ್ಪ ವೃತ್ತಿಯಿಂದ ಛಾಯಾಗ್ರಾಹಕ. ಮನೆಯಲ್ಲಿ ಸಂಗೀತ ಕಲಿತವರ್‍ಯಾರೂ ಇರಲಿಲ್ಲ. ಆದರೆ ಈ ಹುಡುಗ ಪುಸ್ತಕಗಳಿಗಿಂತ ಹೆಚ್ಚು ಸ್ವರಗಳನ್ನೇ ಹಚ್ಚಿಕೊಂಡ. ಕೀಬೋರ್ಡ್, ಪಿಯಾನೊ ಜೊತೆ ಸ್ನೇಹ ಬೆಳೆಯಿತು. ಕರ್ನಾಟಕಿ ಸಂಗೀತದ ಬಗೆಗೂ ಒಲವಾಯಿತು.

ಸಿನಿಮಾದಲ್ಲೇ ಭವಿಷ್ಯ ಹುಡುಕಿಕೊಳ್ಳಲು ನಿರ್ಧರಿಸಿ ಸುಮಾರು ಹನ್ನೆರಡು ವರ್ಷಗಳ ಹಿಂದೆ ಗಾಂಧಿನಗರದಲ್ಲಿ ಸುಳಿದಾಡ ತೊಡಗಿದ ಅರ್ಜುನ್‌ರ ಮೊದಲ ಗುರು ವಿ. ಮನೋಹರ್. ಅವರ ತಂಡದಲ್ಲಿ ಒಂದಷ್ಟು ಕಾಲ ಕೀಬೋರ್ಡ್ ನುಡಿಸಿದರು. ಕಲ್ಯಾಣ್ ಜೊತೆಯೂ ಕೆಲಸ ಮಾಡಿದರು. ನಂತರದ ದಿನಗಳಲ್ಲಿ ಫ್ರೀಲಾನ್ಸ್ ಸಂಗೀತಗಾರನಾಗಿ ಬೇರೆಬೇರೆಯವರ ಜೊತೆ ಕೆಲಸ ಮಾಡಿದರೂ, ಸ್ವತಂತ್ರ ಸಂಗೀತ ನಿರ್ದೇಶಕನಾಗುವ ಕನಸು ಮಾತ್ರ ಕಾವು ಕಳೆದುಕೊಂಡಿರಲಿಲ್ಲ.

ನಾಲ್ಕು ವರ್ಷದ ಹಿಂದೆ ಸ್ವತಂತ್ರ ಸಂಗೀತ ನಿರ್ದೇಶಕರಾದ ಅರ್ಜುನ್ ಈವರೆಗೆ ಸಂಗೀತ ನೀಡಿರುವ ಚಿತ್ರಗಳ ಸಂಖ್ಯೆ ಹನ್ನೊಂದು. 'ಬಿರುಗಾಳಿ', 'ಸ್ಲಂಬಾಲ', 'ಸಂಚಾರಿ', 'ಪಟ್ರೆ ಲವ್ಸ್ ಪದ್ಮ' ಹಾಗೂ 'ಧಿಮಾಕು' ಅವರ ಸ್ವರ ಸಂಯೋಜನೆಯ ಪ್ರಮುಖ ಚಿತ್ರಗಳು. 'ಮರೆಯಲಾರೆ' ಹಾಗೂ 'ಕೆಂಪೇಗೌಡ' ಅವರು ತೊಡಗಿಕೊಂಡಿರುವ ಹೊಸ ಚಿತ್ರಗಳು. ಎರಡು ವಾರಗಳ ಹಿಂದೆ ಬಿಡುಗಡೆಯಾದ 'ಗುಬ್ಬಿ' ಚಿತ್ರದ ಸಂಗೀತ ಅರ್ಜುನ್ ಅವರದ್ದೇ. ಸಿನಿಮಾ ನೋಡಿದ ಬಹುತೇಕರು ಯುವ ಸಂಗೀತ ನಿರ್ದೇಶಕನಿಗೆ ಶಹಬ್ಬಾಸ್‌ಗಿರಿ ಕೊಟ್ಟಿದ್ದಾರೆ. ಆದರೆ ಗಲ್ಲಾಪೆಟ್ಟಿಗೆಯಲ್ಲಿ 'ಗುಬ್ಬಿ'ಯ ಓಟ ಅಷ್ಟೇನೂ ವೇಗವಾಗಿಲ್ಲ. ಈ ವೈರುಧ್ಯ ಅರ್ಜುನ್‌ಗೆ ಹೊಸತಲ್ಲ. ಅವರ ಬಹುತೇಕ ಚಿತ್ರಗಳ ಸಂಗೀತಕ್ಕೆ ಉದ್ಯಮದಿಂದ ಹಾಗೂ ಪ್ರೇಕ್ಷಕರಿಂದ ಪ್ರಶಂಸೆ ದೊರಕಿದೆ. ಆದರೆ ಸಿನಿಮಾಗಳು ದೊಡ್ಡ ಹಿಟ್ ಅನ್ನಿಸಿಕೊಂಡಿಲ್ಲ. ಸಿನಿಮಾಗಳು ಸೋತರೂ ತಮ್ಮ ಕೆಲಸಕ್ಕೆ ಪ್ರಶಂಸೆ ವ್ಯಕ್ತವಾಗಿರುವ ಬಗ್ಗೆ ಅರ್ಜುನ್‌ಗೆ ಖುಷಿಯಿದೆ. ಸಿನಿಮಾಗಳ ಸೋಲಿನ ಬಗ್ಗೆ ಖೇದವೂ ಇದೆ.

'ಪುನರಾವರ್ತನೆ ಎನ್ನುವುದು ನನ್ನ ಸಂಗೀತದಲ್ಲಿ ಕಾಣಿಸೊಲ್ಲ. ಬೇರೆ ಸಂಗೀತ ನಿರ್ದೇಶಕರಿಗಿಂತಲೂ ಭಿನ್ನ ಟ್ರಾಕ್‌ಗಳ ಹುಡುಕಾಟ ನನ್ನದು. ಮಾಧುರ್ಯ ಹಾಗೂ ವೇಗ– ಎರಡೂ ನನ್ನ ಸಂಗೀತದಲ್ಲಿರುತ್ತದೆ. ನಾನೂ ರೂಪಿಸುವ ಎಲ್ಲ ಗೀತೆಗಳಲ್ಲೂ ನನ್ನದೇ ಆದ ಛಾಪು ಕೇಳುಗರಿಗೆ ಗೋಚರಿಸುತ್ತದೆ'– ಹೀಗೆ, ತಮ್ಮ ಸಂಗೀತವನ್ನು ಅರ್ಜುನ್ ವಿಶ್ಲೇಷಿಸುತ್ತಾರೆ.

ಅಂದಹಾಗೆ, ಅರ್ಜುನ್ ಹಿನ್ನೆಲೆ ಗಾಯಕ ಕೂಡ. 'ಬಿರುಗಾಳಿ', 'ಗುಬ್ಬಿ' ಹಾಗೂ 'ರಾಜಧಾನಿ' ಚಿತ್ರಗಳಲ್ಲಿ ಹಾಡಿದ್ದಾರೆ. ಆದರೆ ತಮ್ಮನ್ನು ಗಾಯಕನೆಂದು ಕರೆದುಕೊಳ್ಳಲು ಅವರಿಗೆ ಮುಜುಗರ. 'ನಾನು ಟ್ರ್ಯಾಕ್‌ಗೆ ಹಾಡುತ್ತೇನೆ. ಕೆಲವು ಸಲ– ಇದೇ ಚೆನ್ನಾಗಿದೆ, ಉಳಿಸಿಕೊಳ್ಳಿ ಎಂದು ಚಿತ್ರತಂಡ ಒತ್ತಾಯಿಸಿದಾಗ ಆ ಗೀತೆಯನ್ನು ಉಳಿಸಿಕೊಂಡಿರುವೆ. ನಾನು ಗಾಯಕನಾಗಿರುವುದು ಹೀಗೆ' ಎನ್ನುವ ಅರ್ಜುನ್, ಹಂಸಲೇಖಾ ಅವರು ಹಾಡಲಿಕ್ಕೆ ಕರೆದಾಗ ವಿನಯದಿಂದಲೇ ನಿರಾಕರಿಸಿದ್ದಾರೆ.



ಪ್ರಸ್ತುತ ಕನ್ನಡ ಚಿತ್ರರಂಗದಲ್ಲಿರುವ ಪ್ರತಿಭಾವಂತ ಯುವ ಸಂಗೀತಗಾರರ ಬಗ್ಗೆ ಅರ್ಜುನ್‌ಗೆ ಹೆಮ್ಮೆಯಿದೆ. ಕನ್ನಡ ಸಿನಿಮಾ ಸಂಗೀತ ಯಾವುದೇ ಭಾಷೆಯ ಚಿತ್ರರಂಗಕ್ಕೂ ಸವಾಲೊಡ್ಡುವಂತಿದೆ ಎನ್ನುವುದು ಅವರ ವಿಶ್ವಾಸ.

ಅರ್ಜುನ್ ಕೆಲಸ ಮಾಡಿರುವುದು ಹೆಚ್ಚಾಗಿ ಹೊಸಬರೊಂದಿಗೆ. 'ನಾನು ಯಾರ ಬಳಿಯೂ ಕೆಲಸ ಕೇಳಿಕೊಂಡು ಹೋಗಿಲ್ಲ. ನನಗದೂ ಗೊತ್ತೂ ಇಲ್ಲ' ಎನ್ನುವ ಅವರ ಪಾಲಿಗೆ ಸಂಗೀತ ಎನ್ನುವುದು ಸ್ವಾಭಿಮಾನದ ರೂಪವೂ ಹೌದು.

★ ರಚಹ